# <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

***Crl. Misc. 428/2025***

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ ಪಡೆದುಕೊಳ್ಳಲಾಯಿತು.
ದಿನಾಂಕ: 29-09-2025 PW-1

ಹೆಸರು :- ಕರಿಷ್ಮಾ

ಗಂಡನ ಹೆಸರು :- ಸಾಗರ

ವಯಸ್ಸು :- 24 ವರ್ಷ

ಉದ್ಯೋಗ :- ಮನೆಕೆಲಸ

ವಾಸಸ್ಥಳ :- ಚಿಂಚೋಳಿ

**<u>ಮೌಖಿಕ ವಿಚಾರಣೆ ಃ-</u>**

ದಿಃ 23-05-2019 ರಂದು ಭಾಗ್ಯವಂತಿ ಕಲ್ಯಾಣ ಮಂಟಪ ಚಿಂಚೋಳಿಯಲ್ಲಿ ನನ್ನ ತವರುಮನೆಯವರು ಎದುರರುದಾರನೊಂದಿಗೆ ಮದುವೆ ಮಾಡಿಕೊಟ್ಟಿರುತ್ತಾರೆ.

ಮದುವೆ ಸಮಯದಲಿ 5 ತೊಲೆ ಬಂಗಾರ, 1 ಲಕ್ಷ ರೂ. ಎದುರುದಾರನಿಗೆ ಕೊಟ್ಟಿರುತ್ತಾರೆ. ಮದುವೆ ಖರ್ಚನ್ನು ನಮ್ಮ ತವರು ಮನೆಯವರು ಮಾಡಿರುತ್ತಾರೆ. ನನ್ನ ಗಂಡನೊಂದಿಗೆ ವೈವಾಹಿಕ ಜೀವನ ನಡೆಸಿದ ನಂತರ ನಮಗೆ ಇಬ್ಬರು ಮಕ್ಕಳು ಇದ್ದು ಅವರ ಹೆಸರು ಅವನಿ ಮತ್ತು ಸಾನ್ವಿ ಇರುತ್ತಾರೆ.

ಮದುವೆಯಾದ 4 ವರ್ಷಗಳ ಕಾಲ ನನ್ನೊಂದಿಗೆ ಎದುರುದಾರನು ಚೆನಾಗಿದ್ದು ಆ ನಂತರ ಕಿರುಕುಳ ಕೊಡಲು ಪ್ರಾರಂಭಿಸಿರುತ್ತಾನೆ. ವರದಕ್ಷಿಣೆ ತಂದರೆ ಮನೆಯಲ್ಲಿ ಇಟ್ಟುಕೊಳ್ಳುತ್ತೇನೆ ಇಲ್ಲದಿದ್ದರೆ ಮನೆಯಿಂದ ಹೊರಹಾಕುತ್ತೇನೆ ಎಂದು ನುಡಿಯುತ್ತಾರೆ. ಈ ಕುರಿತು ಊರಿನ ಹಿರಿಯರ ಮುಂದೆ 4-5 ಬಾರಿ ನ್ಯಾಯ ಪಂಚಾಯತಿ ಆಗಿರುತ್ತದೆ. ಆದರೂ ಎದುರುದಾರನು ಕಿರುಕುಳ ನೀಡುವುದನ್ನು ಬಿಟ್ಟಿರುವುದಿಲ್ಲ. ನನ್ನ ತಂದೆ ತಾಯಿ

ಬಡವರಿದ್ದು ಅವರಿಗೆ ವರದಕ್ಷಿಣೆ ಕೊಡಲು ಆಗುವುದಿಲ್ಲ. ಎದುರುದಾರನು ನನ್ನ ಮೇಲೆ ಅನುಮಾನ ಪಡುತ್ತಾನೆ. ನನ್ನ ಗಂಡನ ಮನೆ ಹೊಲದಲ್ಲಿದ್ದು ಸುತ್ತಮುತ್ತ ಯಾರೂ ಇರುವುದಿಲ್ಲ ನನಗೆ ಹೊಡೆ ಬಡೆ ಮಾಡುತ್ತಾನೆ. ಈಗ ನಾನು ಮತ್ತು ಅರ್ಜಿದಾರ 2 ಮತ್ತು 3 ರವರು ನನ್ನ ತವರು ಮನೆಯಲ್ಲಿ ಇರುತ್ತೇವೆ.

ಎದುರುದಾರನಿಗೆ 7 ಎಕರೆ ಜಮೀನು ದ್ರಾಕ್ಷಿ ತೋಟ ಇರುತ್ತದೆ. ವರ್ಷಕ್ಕೆ 20 ರಿಂದ 30 ಲಕ್ಷ ವರಮಾನ ಇರುತ್ತದೆ. ನನಗೆ ಮತ್ತು ಅರ್ಜಿದಾರ 2 ಮತ್ತು 3 ರವರಿಗೆ ಪ್ರತಿ ತಿಂಗಳು 20 ಸಾವಿರ ನೀಡಲು ಎದುರುದಾರನು ಅರ್ಹನಿರುತ್ತಾನೆ.

ಮದುವೆ ಆಮಂತ್ರಣ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ **1** ಎಂದು, ಮದುವೆ ಸಮಯಕ್ಕೆ ತೆಗೆಯಲಾದ ಭಾವಚಿತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ **2** ಎಂದು, ಬಾಬಾನಗರ ತಾಲೂಕು ತಿಕೋಟದ ಸರ್ವೆ ನಂ. 133/2 ಮತ್ತು 133/6 ರ 2024-25 ನೇ ಸಾಲಿನ ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ **3** ಮತ್ತು **4** ಎಂದು ಗುರುತಿಸಲಾಯಿತು.

ಈಗ ನನ್ನ ಮತ್ತು ನನ್ನ ಇಬ್ಬರು ಮಕ್ಕಳ ಜೀವನೋಪಚಾರಕ್ಕಾಗಿ ಎದುರುದಾರನಿಂದ ಜೀವನಾಂಶ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಆದ್ದರಿಂದ ಸದರಿ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ಪುರಸ್ಕರಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಪಾಟೀಸವಾಲುಃ ಎದುರುದಾರನು ಗೈರು ಹಾಜರಿದ್ದು ಪಾಟೀಸವಾಲು ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ